ವಾಮನಾಕೃತಿಯ ತ್ರಿವಿಕ್ರಮ ವ್ಯಕ್ತಿತ್ವ

ಸ್ವಾಮಿ ಸ್ಮರಣಾನಂದ

ಪರಮಪೂಜ್ಯ ಸ್ವಾಮಿ ವೀರೇಶ್ವರಾನಂದಜಿ ಮಹಾರಾಜ್ ಅವರು ರಾಮಕೃಷ್ಣ ಮಠ ಮತ್ತು ಮಿಷನ್ನಿನ ಹತ್ತನೆಯ ಪರಮಾಧ್ಯಕ್ಷರಾಗಿದ್ದರು. ಅಗಾಧ ಪಾಂಡಿತ್ಯ, ಅಪ್ರತಿಮ ಕಾರ್ಯಶೀಲತೆ ಮತ್ತು ಆಧ್ಯಾತ್ಮಿಕ ಔನ್ನತ್ಯಗಳಿಗೆ ಅವರು ಹೆಸರು ವಾಸಿಯಾಗಿದ್ದರು. ಅವರ ಕೆಲವು ಮಧುರ ನೆನಪುಗಳನ್ನು ಇಲ್ಲಿ ದಾಖಲಿಸಿರುವ ಪೂಜ್ಯ ಸ್ವಾಮೀಜಿಯವರು ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರು.

ಈ ಭೂಮಂಡಲದಲ್ಲಿ ಕೆಲವರು ಶ್ರೇಷ್ಠತೆಯನ್ನು ಮೈಗೂಡಿಸಿಕೊಂಡೇ ಜನ್ಮತಳೆಯುತ್ತಾರೆ. ಕೆಲವರು ಸ್ವಪ್ರಯತ್ನದಿಂದ ಘನತೆಗೆ ಏರುತ್ತಾರೆ. ಮತ್ತೆ ಕೆಲವರಿಗೆ ಘನತೆಯನ್ನು ಆರೋಪಿಸಲಾಗುತ್ತದೆ. ಆದರೆ 'ಮಹಾನತೆ' ಎಂದರೆ ಏನು ಎಂದು ನಾವು ಸರಿಯಾಗಿ ಅರ್ಥಮಾಡಿಕೊಂಡಿದ್ದೇವೆಯೇ ಎಂಬುದನ್ನು ಆಲೋಚಿಸಬೇಕಾಗಿದೆ. ಸ್ವಾಮಿ ವಿವೇಕಾನಂದರು ಒಂದು ಕಡೆ ಹೀಗೆ ಹೇಳುತ್ತಾರೆ: "ನನಗೆ ವಯಸ್ಸು ಹೆಚ್ಚಾಗಿ ಮನಸ್ಸು ಪರಿಪಕ್ವವಾದಂತೆಲ್ಲ, ಸಣ್ಣಪುಟ್ಟ ಸಾಧಾರಣ ವಿಷಯಗಳಲ್ಲಿಯೂ ಸಹ ಮಹಾನತೆಯನ್ನು ಕಾಣಲು ಇಚ್ಛಿಸುವಂತಾಗಿದೆ. ಶ್ರೇಷ್ಠಮಟ್ಟದಲ್ಲಿರುವ ಮನುಷ್ಯರು ಯಾವ ರೀತಿಯಲ್ಲಿ ಜೀವನಯಾಪನೆ ಮಾಡುತ್ತಾರೆ – ಅಂದರೆ ಏನು ತಿನ್ನುತ್ತಾರೆ, ಯಾವ ರೀತಿ ಉಡುಪು ಧರಿಸುತ್ತಾರೆ, ಕೆಲಸಗಾರರೊಂದಿಗೆ ಹೇಗೆ ವರ್ತಿಸುತ್ತಾರೆ ಇತ್ಯಾದಿಗಳನ್ನು ತಿಳಿಯುವ ಕುತೂಹಲ ನನಗೆ. ನಾನು ಸರ್ ಫಿಲಿಪ್ ಸಿಡ್ನಿಯ ದೃಷ್ಟಿಕೋನದಲ್ಲಿ ಮಹಾನತೆಯನ್ನು ಕಾಣಲು ಆಶಿಸುತ್ತೇನೆ. ಮೃತ್ಯುವಿನ ಮುಖಾಮುಖಿ ನಿಂತು ಇತರರ ಕಷ್ಟಪರಿಹಾರಕ್ಕೆ ಹೆಗಲು ನೀಡುವ ಸಹೃದಯರು ಅತಿ ವಿರಳ."

ಸ್ವಾಮಿ ವಿವೇಕಾನಂದರ ಈ ಅಭಿಪ್ರಾಯದ ಬೆಳಕಿನಲ್ಲಿ ರಾಮಕೃಷ್ಣ ಮಹಾಸಂಘದ ಹತ್ತನೆಯ ಅಧ್ಯಕ್ಷರಾದ ಸ್ವಾಮಿ ವೀರೇಶ್ವರಾನಂದಜಿ ಮಹಾರಾಜರ ಶಾಂತ ಗಂಭೀರ ಜೀವನವನ್ನು ಅವಲೋಕಿಸಿ ಅರ್ಥಮಾಡಿಕೊಳ್ಳಬಹುದು.

ಜನಸಾಮಾನ್ಯರಲ್ಲಿ ಒಬ್ಬರಾಗಿ ಬೆರೆತುಹೋಗುವ, ಪ್ರಚಾರಕ್ಕೆ ಬೆನ್ನುತಿರುಗಿಸುವ ಈ ಕೃಶಕಾಯರನ್ನು ಜನಜಂಗುಳಿಯಲ್ಲಿ ಗುರುತಿಸುವುದು ಕಠಿಣ ಕಾರ್ಯವೇ ಸರಿ. ನೇಪಥ್ಯದಲ್ಲಿ ಇರುವುದೇ ಅವರಿಗೆ ಅಭ್ಯಾಸ, ಆನಂದ. ರಾಮಕೃಷ್ಣ ಸಂಘದ ಹೆಚ್ಚುಹೆಚ್ಚಿನ ಜವಾಬ್ದಾರಿಗಳನ್ನು ಅವರಿಗೆ ನೀಡಿದಾಗ, ಅವರು ಅವುಗಳಲ್ಲಿ ಯಶಸ್ಸು ಕಂಡದ್ದು ಮಾತ್ರವಲ್ಲ, ತಮ್ಮ ಅಂತರಾಳದ ಸಾಮರ್ಥ್ಯದಿಂದ ಒಂದು ವಿನೂತನ ಉಚ್ಚ ಸ್ಥಾನದ ಔನ್ನತ್ಯಕ್ಕೆ ಏರಿದ ಮಹಾತ್ಮರು ಅವರು. ಇಂತಹ ಸಂನ್ಯಾಸಿಗಳು ಅತಿ ವಿರಳ.

೧೯೫೪ನೇ ವರ್ಷದಿಂದಲೇ ಸ್ವಾಮಿ ವೀರೇಶ್ವರಾನಂದರು ನನ್ನ ಸ್ಮೃತಿಪಟಲದಲ್ಲಿ ವಿರಾಜಮಾನರಾಗಿದ್ದಾರೆ. ಆಗ ಅವರು ರಾಮಕೃಷ್ಣ ಮಠ ಮತ್ತು ಮಿಷನ್ನಿನ ಸಹಾಯಕ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಅವರು ೧೯೬೬ ರಿಂದ ೧೯೮೫ ರವರೆಗೆ ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರಾಗಿದ್ದರು. ಈ ಸುದೀರ್ಘ ಸಮಯದಲ್ಲಿ ಅವರ ಒಡನಾಟದಲ್ಲಿರುತ್ತ, ಅವರ ಆಂತರ್ಯದ ಮಾಧುರ್ಯವನ್ನು ಅರಿತು ಅನುಭವಿಸುವ ಸುಯೋಗ ನನ್ನದಾಗಿತ್ತು.

ಪ್ರಭು ಮಹಾರಾಜರು (ಸ್ವಾಮಿ ವೀರೇಶ್ವರಾನಂದಜಿ) ರಾಮಕೃಷ್ಣ ಮಠ ಮತ್ತು ಮಿಷನ್ನಿನ ಸಹಾಯಕ ಕಾರ್ಯದರ್ಶಿಗಳಾಗಿದ್ದ ಸಮಯದಲ್ಲಿ ಅವರ ಕೋಣೆ ಕಟ್ಟಡದ ಮೇಲು ಛಾವಣಿಯ ಒಂದು ಭಾಗದಲ್ಲಿತ್ತು. ಅದು ಆಸ್‌ಬೆಸ್ಟಾಸ್ ಷೀಟುಗಳನ್ನು ಹೊದಿಸಿದ್ದ ಚಿಕ್ಕದಾದ ಕೋಣೆ. ಸಂಘಾಧ್ಯಕ್ಷರಾದ ಮೇಲೆಯೂ ಇದೇ ಕೋಣೆಯಲ್ಲಿಯೇ ಅವರ ವಾಸ. ಕೊಠಡಿಯಲ್ಲಿ ಯಾವ ಪೀಠೋಪಕರಣಗಳೂ ಇಲ್ಲದಿದ್ದ ಕಾರಣ ಒಂದು ರೀತಿಯ ನಿರ್ಜನ ವಾತಾವರಣ ಅಲ್ಲಿ ಸೃಷ್ಟಿಯಾಗಿತ್ತು. ಈ ಕೋಣೆಗೆ ಸಂಬಂಧಿಸಿದಂತೆ ಮನಮುಟ್ಟುವ ಒಂದು ಘಟನೆ ನನ್ನ ನೆನಪಿನಲ್ಲಿದೆ. ಒಂದು ಸಲ ಸಾಧು-ಬ್ರಹ್ಮಚಾರಿಗಳೆಲ್ಲರೂ ಒಟ್ಟಿಗೆ ಅವರ ದರ್ಶನಕ್ಕೆ ಹೋದರು. ಇದ್ದಕ್ಕಿದ್ದಂತೆಯೇ ಜೋರುಗಾಳಿಯೊಂದಿಗೆ ಬಿರುಮಳೆ ಪ್ರಾರಂಭವಾಗಿಬಿಟ್ಟಿತು. ಆ ಕೂಡಲೇ ಮಳೆಯ ನೀರು ಅವರ ಹಾಸಿಗೆಯ ಮೇಲೆಯೇ ಸೋರಲು ಪ್ರಾರಂಭವಾಯಿತು! ಅದನ್ನು ಕೋಣೆಯಲ್ಲಿ ನೀರು ಸೋರದಿದ್ದ ಒಂದು ಮೂಲೆಗೆ ಇತರರ ನೆರವಿನಿಂದ ಸರಿಸಿ ಇಟ್ಟರು. ಅವರಾದರೋ ಸಂಘಗುರು; ಅವರ ವಾಸಸ್ಥಳ ಹೀಗೆ ಜೀರ್ಣಾವಸ್ಥೆಯಲ್ಲಿ! ಇದನ್ನು ನೋಡಿ ಸಹಿಸಲಾರದೆ, ಮಾತಿನ ಮಧ್ಯೆ ಒಂದು ಸಲ ಹೇಳಿಯೇಬಿಟ್ಟೆ, "ಮಹಾರಾಜ್, ನೀವು ದೀರ್ಘಕಾಲದ ಪ್ರಯಾಣ ಹೋದಾಗ ಈ ವಾಸಗೃಹವನ್ನು ದುರಸ್ತುಗೊಳಿಸುವ ಅಗತ್ಯ ಇದೆ" ಎಂದು. ಅದಕ್ಕೆ ಅವರು ತಟ್ಟನೆ ಉತ್ತರಕೊಟ್ಟರು: "ನಾನು ಹೊರಟುಹೋದಮೇಲಷ್ಟೆ ನೀನು ಆ ಕೆಲಸ ಮಾಡುವಿಯಂತೆ." ವಾಸ್ತವವಾಗಿ ಅವರ ಮಹಾಸಮಾಧಿಯ ನಂತರವಷ್ಟೇ ಆ ಮನೆಯನ್ನು ದುರಸ್ತಿಗೊಳಿಸಲಾಯಿತು.

ಪೂಜ್ಯ ಸ್ವಾಮೀಜಿಯವರು ಮೊದಲು ಸಹಾಯಕ ಕಾರ್ಯದರ್ಶಿಗಳಾಗಿ, ಅನಂತರ ಪ್ರಧಾನ ಕಾರ್ಯದರ್ಶಿಗಳಾಗಿ ಸೇವೆ ನಿರ್ವಹಿಸಿದರು. ಕೊನೆಯದಾಗಿ ಸಂಘಾಧ್ಯಕ್ಷರಾಗಿ, ಸಂಘಗುರುಗಳಾಗಿ ಸುದೀರ್ಘ ೧೯ ವರ್ಷಗಳ ಕಾಲ ರಾಮಕೃಷ್ಣ ಸಂಘದ ಮಹಾಕಾಶದಲ್ಲಿ ದೇದೀಪ್ಯಮಾನರಾಗಿ ಬೆಳಗಿದರು. ಶ್ರೀರಾಮಕೃಷ್ಣರು, ಶ್ರೀಮಾತೆ ಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರಿಗೆ ಮುಡಿಪಾದ ಈ ಮಹಾ ಸಂಘಕ್ಕೆ ಅವರು ತಮ್ಮ ಪ್ರಾಣವನ್ನೇ ನಿವೇದಿಸಿದ್ದರು. ಅವರ ಈ ಕಪಟಹೀನ ಸಮರ್ಪಣಾಭಾವನೆ ಎನ್ನುವುದು ಅವರ ಪ್ರತಿಕಾರ್ಯದಲ್ಲಿಯೂ ಅರಳಿ ನಿಲ್ಲುತ್ತಿದ್ದುದನ್ನು ಕಾಣಬಹುದಾಗಿತ್ತು. ಅತಿ ಸಣ್ಣಪುಟ್ಟ ಕೆಲಸಗಳಲ್ಲಿಯೂ ಸಹ ಅವರ ಶಿಷ್ಟಾಚಾರದ ನಡವಳಿಕೆಯನ್ನು ನೋಡಬಹುದಾಗಿತ್ತು. ಸಾಧುಗಳು ಮತ್ತು ಬ್ರಹ್ಮಚಾರಿಗಳೊಂದಿಗಿನ, ಭಕ್ತರು ಹಾಗೂ ವಿಭಿನ್ನ ಜನರೊಂದಿಗಿನ ಅವರ ವ್ಯವಹಾರದಲ್ಲಿ ಒಂದು ರೀತಿಯ ಮಧುರ ಬಾಂಧವ್ಯದ ಹೃದಯವಂತಿಕೆ ಇರುತ್ತಿತ್ತು. ಈ ಮನೋಭಾವದಿಂದಾಗಿ ಅವರು ಎಲ್ಲರ ಗೌರವಾದರಗಳಿಗೆ ಪಾತ್ರರಾಗಿದ್ದರು. ಸಂಘಗುರುಗಳಾದ ಇವರಿಗೆ ಭಕ್ತರು ಕಾಣಿಕೆಯ ರೂಪದಲ್ಲಿ ಸ್ವೆಟರುಗಳು, ಶಾಲುಗಳು, ಕಾಲುಚೀಲ, ಉಪ್ಪಿನಕಾಯಿ, ಉತ್ತಮವಾದ ಟೀಪುಡಿ ಮುಂತಾದವನ್ನು ಅರ್ಪಿಸುತ್ತಿದ್ದರು. ಅವರು ಇವುಗಳನ್ನೆಲ್ಲ ಬಹು ಎಚ್ಚರಿಕೆಯಿಂದ ಸಂರಕ್ಷಿಸಿ ಇಡುತ್ತಿದ್ದರು. ಆವಶ್ಯಕತೆ ಒದಗಿಬಂದಾಗ ಇತರರಿಗೆ ಹಂಚಿಬಿಡುತ್ತಿದ್ದರು.

ಒಂದು ಸಲ ನಾನು ಹಿಮಾಲಯದ ಮಡಿಲಲ್ಲಿರುವ ಮಾಯಾವತಿ ಆಶ್ರಮಕ್ಕೆ ಹೊರಟಿದ್ದೆ. ಮಹಾರಾಜರ ಅನುಮತಿ ಪಡೆಯಲು ಅವರ ಬಳಿಗೆ ಹೋದೆ. ಅವರು ಹೇಳಿದರು: "ಓ! ನೀನು ಮಾಯಾವತಿಗೆ ಹೋಗುತ್ತಿದ್ದೀಯೇನು?! ಸ್ವಲ್ಪ ಸಮಯದ ನಂತರ ಮತ್ತೆ ಬಾ. ಅಲ್ಲಿರುವ ಮೋಹನಲಾಲ್ ಷಾಜಿ ಅವರಿಗೆ ಕೆಲವೊಂದು ವಸ್ತುಗಳನ್ನು ಕೊಡುತ್ತೇನೆ. ಆ ವೃದ್ಧ, ಸ್ವಾಮಿ ವಿವೇಕಾನಂದರನ್ನು ಮಾಯಾವತಿಯಲ್ಲಿ ದರ್ಶನ ಮಾಡಿದ್ದಾನೆ." ಹೀಗೆಯೇ ಮತ್ತೆ ಯಾರೋ ಒಬ್ಬರು ಖಾರವಾದ ಉಪ್ಪಿನಕಾಯಿಯ ಪ್ರಿಯರು. ಅವರಿಗೆ ಸ್ವಾಮೀಜಿ ಉಪ್ಪಿನಕಾಯಿ ಕಳಿಸಿಕೊಡುತ್ತಿದ್ದರು. ಈ ಕಾರ್ಯಗಳೆಲ್ಲವೂ ಸಾಮಾನ್ಯರೀತಿಯವೇ ಹೌದು. ಆದರೆ ಇವೆಲ್ಲವೂ ಒಟ್ಟಾರೆ, ಅಂತರಾಳದಲ್ಲಿ ಅವರಿಗೆ ಇತರರಲ್ಲಿದ್ದ ಪ್ರೀತಿಯನ್ನು ಪ್ರಕಾಶಪಡಿಸುತ್ತವೆ.

ಕೂಚ್‌ಬಿಹಾರ್‌ನ ಒಬ್ಬ ಮಹಿಳಾ ಭಕ್ತೆ ನನಗೊಂದು ಹೃದಯಂಗಮ ಘಟನೆಯನ್ನು ಒಮ್ಮೆ ಹೇಳಿದಳು. ಸಂಘಾಧ್ಯಕ್ಷರಾಗಿದ್ದ ಪ್ರಭು ಮಹಾರಾಜರಿಗೆ ಪ್ರಣಾಮಗಳನ್ನು ಸಲ್ಲಿಸಲು ಬೇಲೂರು ಮಠಕ್ಕೆ ಕರೆದುಕೊಂಡು ಹೋಗುವಂತೆ ತನ್ನ ಮಗನನ್ನು ಆಕೆ ಒತ್ತಾಯಿಸುತ್ತಿದ್ದಳು. ಮಗ ಇದಕ್ಕೆ ಒಪ್ಪಿಕೊಳ್ಳಲಿಲ್ಲ. ಅವನು ಹೇಳಿದ, "ಅಮ್ಮಾ, ನೀನು ಅವರನ್ನು ನೋಡಿದ್ದು ಯಾವಾಗಲೋ. ಸ್ವಾಮೀಜಿ ನಿನ್ನನ್ನು ಗುರುತಿಸುವುದು ಸಾಧ್ಯವೇ ಇಲ್ಲ. ಇಷ್ಟಕ್ಕೂ ನಿನಗೇನೂ ತಿಳಿಯದು. ಈಗಿನ ಮಠ, ಮಿಷನ್ನು ಕೇವಲ ದೊಡ್ಡ ಮನುಷ್ಯರಿಗೆ ಮಾತ್ರ,

ಸುಮ್ಮನಿರು." ಮಗನ ಮಾತನ್ನು ಕೇಳಿಕೊಂಡು ತಾಯಿ ಸುಮ್ಮನಾಗಲಿಲ್ಲ. ಪದೇ ಪದೇ ಮಗನನ್ನು ಒತ್ತಾಯಿಸುತ್ತಲೇ ಇದ್ದಳು. ಕೊನೆಗೊಮ್ಮೆ ವಿಧಿ ಇಲ್ಲದೆ ಮಗ ತಾಯಿಯನ್ನು ಬೇಲೂರು ಮಠಕ್ಕೆ ಕರೆತಂದ. ಈ ಮಹಿಳೆ ಸಂಘಾಧ್ಯಕ್ಷರನ್ನು ಕಂಡು, ಭಕ್ತಿಯಿಂದ ಪ್ರಣಾಮ ಸಲ್ಲಿಸಿ, ತನ್ನ ಪರಿಚಯವನ್ನು ಹೇಳಿಕೊಂಡಳು. ಮಹಾರಾಜರ ಕಣ್ಣಿನ ಶಕ್ತಿ ಆಗ ಬಹಳ ಕ್ಷೀಣಿಸಿತ್ತು. ಆದರೂ, ಆ ಕೂಡಲೇ ಅವರು ಮೃದುವಾಗಿ ಹೇಳಿದರು: "ಹ್ಹಾ, ನಾನು ಕೂಚ್‌ಬಿಹಾರಿಗೆ ಬಂದಿದ್ದಾಗ ನೀನು ಎಷ್ಟೊಂದು ಶ್ರದ್ಧೆಯಿಂದ ಸ್ವಾದಿಷ್ಟ ಆಹಾರ ತಯಾರಿಸಿ ಕಳಿಸುತ್ತಿದ್ದೆಯಲ್ಲವೇ?" ಅವರ ಮಾತು ಕೇಳಿ ಪುಳಕಗೊಂಡು, ಆನಂದಭರಿತಳಾದ ಭಕ್ತೆ ಮಗನಿಗೆ ಜೋರುಮಾಡಿ ಗಟ್ಟಿಯಾಗಿ ಹೇಳಿದಳು, "ಕೇಳಿಸಿಕೊಂಡೆ ತಾನೇ! ಈಗ ತಿಳಿಯಿತೇ ನಿನಗೆ. ಇವರು ನನ್ನನ್ನು ಮರೆತೇ ಇಲ್ಲ!" ಆದರೆ ನಮಗೆಲ್ಲ ಚೆನ್ನಾಗಿ ಗೊತ್ತೇ ಇತ್ತು, ಮಹಾರಾಜರು ಅಲ್ಪಾಹಾರಿ ಮಾತ್ರವಲ್ಲ; ಸ್ವಾದಿಷ್ಟ ಆಹಾರದ ಬಗ್ಗೆ ಅವರಿಗೆ ಯಾವ ಆಕರ್ಷಣೆಯೂ ಇರಲಿಲ್ಲ!

ಅವರನ್ನು ಕಾಣಲು ಯಾರು ಬೇಕಾದರೂ ನಿರಾತಂಕವಾಗಿ ಹೋಗಬಹುದಿತ್ತು. ಅವರ ಸಮೀಪಕ್ಕೆ ಬಂದವರಿಗೆಲ್ಲಾ ಅವರ ಸರಳತೆಯ ಅನುಭವವಾಗಿ ಮಂತ್ರಮುಗ್ಧರಾಗಿಬಿಡುತ್ತಿದ್ದರು. ಬೇಲೂರು ಮಠದಲ್ಲಿ ಭಗವಾನ್ ಶ್ರೀರಾಮಕೃಷ್ಣರು, ಶ್ರೀಮಾತೆ ಶಾರದಾದೇವಿಯವರು ಮತ್ತು ಸ್ವಾಮಿ ವಿವೇಕಾನಂದರ ಜನ್ಮೋತ್ಸವಗಳನ್ನು ಬಹು ಶ್ರದ್ಧಾಭಕ್ತಿಯಿಂದ ಆಚರಿಸಲಾಗುತ್ತದೆ. ಈ ಉತ್ಸವಗಳಲ್ಲಿ ವಿಪರೀತವಾದ ಜನಸಂದಣಿಯೂ ಇರುತ್ತದೆ. ಈ ಸಂದರ್ಭಗಳಲ್ಲಿ ಮಹಾರಾಜರು ಹಿರಿಯ ಸಾಧುಗಳಿಗೆಂದು ಮಂಟಪದಲ್ಲಿ ಕಾಯ್ದಿರಿಸಿದ ಆಸನಗಳಲ್ಲಿ ಕುಳಿತುಕೊಳ್ಳಲು ಇಷ್ಟವಿಲ್ಲದೆ, ಎಲ್ಲರ ಹಿಂದೆ ಹೋಗಿ ನಿಲ್ಲುತ್ತಿದ್ದರು! ಆ ಜನದಟ್ಟಣೆಯಲ್ಲಿ ಅವರು ಎಲ್ಲಿ ಅಡಗಿ ಹೋಗುತ್ತಿದ್ದರೋ! ಕೀರ್ತಿಯ ಪ್ರಖರ ಪ್ರಕಾಶದಿಂದ ಮರೆಯಾಗಿ ನೇಪಥ್ಯದಲ್ಲಿರುವುದೇ ಅವರ ಸಹಜ ಸ್ವಭಾವವಾಗಿತ್ತು. ಹೀಗಿರುತ್ತಲೇ ಅವರು ತಮ್ಮ ಪಾಲಿಗೆ ಬಂದ ಅತ್ಯಂತ ಗುರುತ್ವಪೂರ್ಣ ಕಾರ್ಯಗಳನ್ನು ಕೂಡ ಬಹು ಯಶಸ್ವಿಯಾಗಿ ನಿರ್ವಹಿಸಿದರು. ಮಹಾಸಂಘದ ಸಹಾಯಕ ಕಾರ್ಯದರ್ಶಿಗಳಾಗಿ, ಅನಂತರ ಪ್ರಧಾನ ಕಾರ್ಯದರ್ಶಿಗಳಾಗಿ ಎಂತೆಂಥ ಕಠಿಣ ಕಾರ್ಯಗಳನ್ನು ಅದೆಷ್ಟು ನಿರಾಯಾಸವಾಗಿ ನಿರ್ವಹಿಸಿದರೆನ್ನುವುದು ಊಹೆಗೂ ನಿಲುಕದ್ದು!

೧೯೫೭ರಲ್ಲಿ ಮುಂಬಯಿಯಲ್ಲಿ ಸಂಭವಿಸಿದ ಒಂದು ಘಟನೆ ನನಗೆ ಚೆನ್ನಾಗಿ ನೆನಪಿದೆ. ಆ ಸಂದರ್ಭದಲ್ಲಿ ನಾನು ಮುಂಬಯಿ ಆಶ್ರಮದಲ್ಲಿ ಬ್ರಹ್ಮಚಾರಿಯಾಗಿದ್ದೆ. ಪ್ರಭು ಮಹಾರಾಜರು ಒಂದು ತಿಂಗಳ ಕಾಲ ಅಲ್ಲಿಯೇ ತಂಗುವುದಕ್ಕಾಗಿ ಬಂದರು. ಇದೇ ಸಮಯದಲ್ಲಿ ಚೀನಾ ದೇಶದ ಅಧ್ಯಕ್ಷರಾದ ಚೌ ಎನ್ ಲಾಯ್ ಮುಂಬಯಿಗೆ ಬಂದರು. ಅವರಿಗೆ ನೀಡಲಾಗುವ ಅದ್ಧೂರಿ ಸ್ವಾಗತವನ್ನು ಪ್ರತ್ಯಕ್ಷವಾಗಿ ನೋಡಲು ಮಹಾರಾಜರು ಆಶಿಸಿದರು. ನನ್ನನ್ನು ತಮ್ಮೊಂದಿಗೆ ಕರೆದುಕೊಂಡು ಹೋಗುವುದೆಂದು ತೀರ್ಮಾನಿಸಿದರು. ಆಶ್ರಮದ ಮುಖ್ಯಸ್ಥ ಸ್ವಾಮಿಗಳು ಪ್ರಮುಖ ಅತಿಥಿಗಳಿಗಾಗಿ ನಿರ್ದಿಷ್ಟಗೊಳಿಸಿದ ಜಾಗದಲ್ಲಿ ಕುಳಿತುಕೊಳ್ಳುವ ವ್ಯವಸ್ಥೆ ಮಾಡುವುದಾಗಿ ಹೇಳಿದರೂ, ಅವರು ಒಪ್ಪಲಿಲ್ಲ. ಸಾಧಾರಣ ಜನರ ಗುಂಪಿನಲ್ಲಿಯೇ ನಿಂತುಕೊಂಡು ಕಾರ್ಯಕಲಾಪಗಳನ್ನು ವೀಕ್ಷಿಸಲು ಉತ್ಸುಕರಾಗಿದ್ದರು! ಸರಿ, ನನ್ನೊಂದಿಗೆ ಮತ್ತೊಬ್ಬರು ವಯಸ್ಸಾದ ಸಂನ್ಯಾಸಿಗಳನ್ನೂ ಕರೆದುಕೊಂಡು ಹೊರಟರು. ಸಭಾಸ್ಥಳವಂತೂ ಜನರಿಂದ ಕಿಕ್ಕಿರಿದಿತ್ತು! ಅನೇಕ ತರುಣರು ಜಮಾಯಿಸಿಬಿಟ್ಟಿದ್ದರು. ಈ ಜನಸಮೂಹದಲ್ಲಿ ಎತ್ತರವಾದ ಒಂದು ಜಾಗದಲ್ಲಿ ನಾವು ಮೂವರೂ ನಿಂತೆವು. ಕಾರ್ಯಕಲಾಪಗಳನ್ನು ಚೆನ್ನಾಗಿ ನೋಡುವ ಉತ್ಸಾಹದಲ್ಲಿ ಕೆಲವರು ಯುವಕರು ಮಹಾರಾಜರ ಭುಜದ ಮೇಲೆಯೇ ಕೈ ಊರಿಕೊಂಡು ನಿಂತಿದ್ದರು! ಹೀಗೆ, ಪೂಜ್ಯ ಸ್ವಾಮಿ ವೀರೇಶ್ವರಾನಂದಜಿ ಮಹಾರಾಜರು ಗಣ್ಯ ಮಾನ್ಯರಿಗಿಂತ ಹೆಚ್ಚಾಗಿ ಸಾಧಾರಣ ಮನುಷ್ಯರ ಮಧ್ಯೆ ಇರುವುದಕ್ಕೇ ಇಷ್ಟಪಡುತ್ತಿದ್ದರು. ಅವರ ಈ ಸಮದರ್ಶಿತ್ವದ ಗುಣವು ಅವರ ಪ್ರತಿ ಕಾರ್ಯದಲ್ಲಿಯೂ ಪ್ರಕಟವಾಗುವುದನ್ನು ನಾನು ಪ್ರತ್ಯಕ್ಷವಾಗಿ ನೋಡಿದ್ದೇನೆ.

ತಮ್ಮ ಸ್ವಂತ ವಿಷಯದಲ್ಲಿ ಅವರಿಗೆ ಯಾವುದೇ ರೀತಿಯ ಬೇಡಿಕೆಗಳೂ ಇರಲಿಲ್ಲ. ಬದಲಿಗೆ ಗ್ರಾಮದ ಬಡಜನರ ಉದ್ಧಾರಕ್ಕಾಗಿ ಅವರ ಕಳಕಳಿ ಮತ್ತು ಬೇಡಿಕೆಗಳು ಅಪಾರ! ಅವರು ಸಂಘಾಧ್ಯಕ್ಷರಾದ ಮೇಲಂತೂ, ಹಳ್ಳಿಯ ಜನರಿಗೆ ನೆರವಾಗುವಂತೆ ನಮ್ಮೆಲ್ಲರಿಗೂ ಪ್ರೋತ್ಸಾಹ ನೀಡುತ್ತಿದ್ದರು. ಅವರು ಹೇಳುತ್ತಿದ್ದರು, "ಏನಪ್ಪಾ, ಕೇವಲ ಉಪನ್ಯಾಸಗಳನ್ನು ಮಾಡುವುದರಿಂದ ಏನಾದರೂ ಲಾಭ ಇದೆಯೇ? ಹಳ್ಳಿಯ ಬಡಜನರ ವಿದ್ಯಾಭ್ಯಾಸಕ್ಕೆ ಅನುಕೂಲತೆಗಳನ್ನು ಕಲ್ಪಿಸಿಕೊಡಿ. ಅವರನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಮೇಲೆತ್ತಲು ಪ್ರಯತ್ನಮಾಡಿ" ಎಂದು. 'ವರ್ತಮಾನ ಯುಗದಲ್ಲಿ ಜೀವಸೇವೆಯೇ ಈಶ್ವರಸೇವೆ' ಎನ್ನುವ ಮಾತನ್ನು ಅವರು ಬೇಸರವಿಲ್ಲದೇ ಪದೇಪದೇ ಒತ್ತಿ ಹೇಳುತ್ತಿದ್ದರು.

ಖಂಡಿತವಾಗಿಯೂ ಅವರು ಹಾಸ್ಯಪ್ರಿಯರಾಗಿದ್ದರು. ಆದರೆ ಅವರೇನಾದರೂ ಗಂಭೀರಭಾವ ತಾಳಿದರೆಂದರೆ ಎಲ್ಲವೂ ಸ್ತಬ್ಧ! ಒಳ್ಳೆಯ ಭಾವದಲ್ಲಿದ್ದಾಗ ಹಾಸ್ಯಚಟಾಕಿಗಳನ್ನು ಹಾರಿಸಿ ನಗುವಿನ ಬಿರುಗಾಳಿಯನ್ನೇ ಎಬ್ಬಿಸಿಬಿಡುತ್ತಿದ್ದರು. ಯಾವಾಗಲೋ ಒಮ್ಮೆ ತಮ್ಮ ಅಸಹಾಯಕ ಪರಿಸ್ಥಿತಿಯ ವರ್ಣನೆ ಮಾಡುತ್ತಾ ಒಂದು ಕತೆ ಹೇಳಿದರು. ಅದು ಹೀಗಿತ್ತು:

ಮದ್ಯಪಾನದಿಂದ ಮತ್ತೇರಿದ ಅವಸ್ಥೆಯಲ್ಲಿದ್ದ ಕೆಲವರು ತಮ್ಮಲ್ಲೇ ಒಬ್ಬನನ್ನು ಶವದಂತೆ ಅಲಂಕರಿಸಿದರು. ದಹನಕಾರ್ಯ ನಡೆಯಬೇಕು. ಹೆಗಲಮೇಲೆ ಹೊತ್ತು ನಡೆದರು. ಕೊಲ್ಕತಾದಲ್ಲಿ ಅನೇಕ ಶ್ಮಶಾನಗಳಿವೆ: ಕಾಶಿಮಿತ್ರ ಘಾಟ್, ನೀಮ್‌ತಲಾ ಘಾಟ್ ಇತ್ಯಾದಿ. ದಹನಕ್ಕೆ ಯಾವ ಘಾಟಿಗೆ ಎತ್ತಿಕೊಂಡು ಹೋಗುವುದೆಂದು ನಿರ್ಣಯ ಮಾಡಿರಲಿಲ್ಲ. ಈ ವಿಷಯದಲ್ಲಿ ವಾಗ್ವಿವಾದ ಪ್ರಾರಂಭವಾಯಿತು. ಒಬ್ಬರು ಹೇಳಿದ್ದನ್ನು ಮತ್ತೊಬ್ಬರು ಒಪ್ಪಲಿಲ್ಲ. ಇವರ ಜಗಳ ಹೊಡೆದಾಟಕ್ಕೆ ಮುಟ್ಟಿತು!

ಆಗ ಯಾರು ಹೆಣದಂತೆ ವೇಷತೊಟ್ಟು ಚಟ್ಟದಲ್ಲಿ ಮಲಗಿದ್ದನೋ ಅವನೇ ಹೇಳಿದ, "ನೋಡ್ರಯ್ಯಾ, ನಾನು ನೀಮ್‌ತಲಾ ಘಾಟ್ ನೋಡಿದ್ದೇನೆ, ಕಾಶಿಮಿತ್ರ ಘಾಟ್ ಸಹ ನೋಡಿದ್ದೇನೆ. ಈ ಎರಡೂ ಕಡೆ ಹೋಗುವ ರಸ್ತೆಯೂ ನನಗೆ ಪರಿಚಯವಿದೆ. ಆದರೆ ಏನು ಮಾಡಲಿ? ಸತ್ತವನಂತೆ ಮಲಗಿದ್ದೇನಲ್ಲ. ಆದ್ದರಿಂದ ಮಾತಾಡದೆ ಸುಮ್ಮನಿದ್ದೇನೆ."

ಪ್ರಭು ಮಹಾರಾಜರಿಗೆ ಚಹಾ ಸೇವನೆ ಎಂದರೆ ಬಲುಪ್ರಿಯ. ಆಗಿಂದಾಗ್ಗೆ ಬಿಸಿಬಿಸಿಯಾಗಿ ಅಲ್ಪಪ್ರಮಾಣದಲ್ಲಿ ಸಣ್ಣ ಕಪ್ಪಿನಲ್ಲಿ ಚಹಾ ತೆಗೆದುಕೊಳ್ಳುತ್ತಿದ್ದರು. ಈ ವಿಷಯದಲ್ಲಿ ತಮಾಷೆ ಮಾಡುತ್ತಾ ಹೀಗೆ ಹೇಳುತ್ತಿದ್ದರು: "ನಾನು ಸತ್ತನಂತರ ದಹನ ಕಾರ್ಯ ಮಾಡುತ್ತೀರಲ್ಲವೇ? ಅನಂತರ ಸ್ವಾದಿಷ್ಟ ಚಹಾ ತಯಾರಿಸಿ ಚಿತೆಯ ಬೆಂಕಿಯನ್ನು ಶಾಂತಗೊಳಿಸಿ."

ರಾಮಕೃಷ್ಣ ಮಹಾಸಂಘದ ಚಿಂತೆಯಲ್ಲದೆ ಅವರಿಗೆ ಬೇರಾವ ಚಿಂತೆಯೂ ಇರಲಿಲ್ಲ. ಸಂಘವೇ ಅವರ ಉಸಿರಾಗಿತ್ತು. ಮಠ ಮತ್ತು ಮಿಷನ್ನಿನ ವಿಷಯದಲ್ಲಿ ಅವರಿಗೆ ಆಳವಾದ ಅನುರಾಗವಿತ್ತು. ಯಾವುದೇ ಕಶ್ಮಲವೂ ಸಂಘವನ್ನು ಸ್ಪರ್ಶಿಸದಂತೆ ಎಚ್ಚರಿಕೆಯಿಂದ ಇರಬೇಕೆಂದು ಆಗಿಂದಾಗ್ಗೆ ಅತ್ಯಂತ ದೃಢಸ್ವರದಲ್ಲಿ ನಮಗೆಲ್ಲ ಎಚ್ಚರಿಕೆ ನೀಡುತ್ತಿದ್ದರು. ನಾನು ಒಂದು ಸಲ ಅವರನ್ನು ಕೇಳಿಯೇಬಿಟ್ಟೆ, "ಮಹಾರಾಜ್, ಮಠ ಮತ್ತು ಮಿಷನ್ನಿನ ಸಂಬಂಧದಲ್ಲಿ ಯಾರಾದರೂ ಕುತಂತ್ರ ನಡೆಸುತ್ತಿದ್ದಾರೆಯೇ?" ಅದಕ್ಕೆ ಅವರು ಬಹು ಉದ್ವೇಗದ ಸ್ವರದಲ್ಲಿ ಹೀಗೆ ಹೇಳಿದರು: "ಇದು ಶ್ರೀರಾಮಕೃಷ್ಣ ಸಂಘ. ಈ ಸಂಘವನ್ನು ಧ್ವಂಸಗೊಳಿಸಬಹುದಾದ ಶಕ್ತಿ ಯಾವುದೂ ಇಲ್ಲ. ಬುದ್ಧಿಗೆಟ್ಟು ಅಂತಹ ಪ್ರಯತ್ನವನ್ನು ಯಾರಾದರೂ ಮಾಡಿದ್ದೇ ಆದರೆ, ಅವರೇ ಧ್ವಂಸವಾಗಿ ಹೋಗುತ್ತಾರೆ." ಶ್ರೀರಾಮಕೃಷ್ಣರು ಮತ್ತು ಶ್ರೀಮಾತೆ ಶಾರದಾದೇವಿಯವರು ಈ ಪವಿತ್ರ ಸಂಘದ ಆಧಾರಸ್ತಂಭಗಳಾಗಿ ಇದ್ದಾರೆ ಎನ್ನುವುದರಲ್ಲಿ ಅವರದು ಅಷ್ಟೊಂದು ದೃಢವಿಶ್ವಾಸ.

ಪೂಜ್ಯ ಸ್ವಾಮಿ ವೀರೇಶ್ವರಾನಂದಜಿ ಮಹಾರಾಜರು ರಾಮಕೃಷ್ಣ ಮಹಾಸಂಘದ ಅಸಂಖ್ಯ ಕೆಲಸ ಕಾರ್ಯಗಳನ್ನು ಸಮರ್ಪಕವಾಗಿ ನೆರವೇರಿಸಲು ಅವಿಶ್ರಾಂತ ದುಡಿಯುತ್ತಿದ್ದರು. ಆದರೂ ಯಾವುದೇ ಕ್ಷಣದಲ್ಲಿ ರಾಮಕೃಷ್ಣ ಲೋಕಕ್ಕೆ ತೆರಳಲು ಸನ್ನದ್ಧರಾಗಿದ್ದರು.

"ಲೋಕಪ್ರಸಿದ್ಧಿ ಗಳಿಸಿ, ಖ್ಯಾತರಾಗಿ, ಕಣ್ಸೆಳೆಯುವ ಜಗಮಗಿಸುವ ಬೆಳಕಿನಲ್ಲಿ ಬಾಳುವುದೇನೂ ಮಹಾನತೆಯ ಬಾಳ್ವೆಯಲ್ಲ; ಸರ್ವೋಚ್ಚ ಆದರ್ಶಗಳನ್ನು ಮತ್ತು ಉದಾತ್ತ ಧ್ಯೇಯಗಳನ್ನು ನಿಷ್ಠೆಯಿಂದ ಪರಿಪಾಲಿಸುತ್ತ ಸಹಜ ಸರಳಜೀವನ ನಡೆಸುವುದರಲ್ಲಿಯೇ ನಿಜವಾದ ಮಹತ್ವವಿದೆ" ಎನ್ನುವುದನ್ನು ಪರಮಪೂಜ್ಯ ಸ್ವಾಮಿ ವೀರೇಶ್ವರಾನಂದಜಿ ಮಹಾರಾಜ್ ಅವರು ತಮ್ಮ ಜೀವನದಲ್ಲಿ ತೋರಿಸಿಕೊಟ್ಟಿದ್ದಾರೆ. ಈ ರೀತಿಯ ಉದಾತ್ತ ಜೀವನ ನಡೆಸಿದಾಗ ಮಾತ್ರವೇ ಕರ್ಮ–ಪೂಜೆಗಳ ನಡುವೆ ಮತ್ತು ಜ್ಞಾನ–ಭಕ್ತಿಗಳ ನಡುವೆ ಸಮನ್ವಯ ಸಾಧ್ಯವಾಗುತ್ತದೆ. ಪರಮಪೂಜ್ಯ ಸ್ವಾಮೀಜಿಯವರು ಈ ಸಮನ್ವಯದ ಪ್ರತಿರೂಪರಾಗಿದ್ದರು.

ಆಧಾರ: 'ಸ್ವಾಮಿ ವೀರೇಶ್ವರಾನಂದ – ಏಕ್ ದಿವ್ಯ ಜೀವನ್' ವಂಗಭಾಷೆಯ ಗ್ರಂಥದಿಂದ – (ಗ್ರಂಥ ಸಂಪಾದಕರು – ಸ್ವಾಮಿ ಚೇತನಾನಂದ) (ಮೂಲ ಇಂಗ್ಲಿಷ್ ಭಾಷೆಯಿಂದ ವಂಗಾನುವಾದ ಮಾಡಿರುವವರು ಸರಿಷಾ ರಾಮಕೃಷ್ಣ ಮಿಶನ್ ಆಶ್ರಮದ ಭಕ್ತೆ ಗಾಯತ್ರಿ ; ಕನ್ನಡ ಅನುವಾದ : ಗಿರಿಜಾದೇವಿ)

ಓದುಗರೇ, ಗಮನಿಸಿ

'ವಿವೇಕಪ್ರಭ' ಪತ್ರಿಕೆಯ ಮುದ್ರಣ ಹಾಗೂ ಕಾಗದದ ಖರ್ಚುಗಳು ದಿನದಿನಕ್ಕೆ ಹೆಚ್ಚಾಗುತ್ತಲೇ ಇವೆ. ಆದರೂ ಕಳೆದ ಹಲವಾರು ವರ್ಷಗಳಿಂದ ಚಂದಾದರವನ್ನು ಹಾಗೆಯೇ ಉಳಿಸಿಕೊಂಡು ಬಂದಿದ್ದೇವೆ. ಇದರಿಂದ ಅತೀವ ನಷ್ಟವನ್ನು ಅನುಭವಿಸಬೇಕಾಗಿ ಬಂದಿದೆ. ಹೀಗಾಗಿ ಬಿಡಿಪ್ರತಿಯ ಬೆಲೆ ಹಾಗೂ ಚಂದಾದರಗಳನ್ನು ನವೆಂಬರ್ ತಿಂಗಳ ಸಂಚಿಕೆಯಿಂದ ಈ ಕೆಳಗಿನಂತೆ ಹೆಚ್ಚಿಸಲೇಬೇಕಾದ ಅನಿವಾರ್ಯ ಪ್ರಸಂಗ ಒದಗಿಬಂದಿದೆ. ನಮ್ಮ ಓದುಗರು ಈ ವಿಚಾರದಲ್ಲಿ ನಮ್ಮೊಡನೆ ಸಹಕರಿಸಬೇಕಾಗಿ ಕೋರಿಕೊಳ್ಳುತ್ತೇವೆ. ಸದ್ಯದ ಚಂದಾದಾರರು ಹಳೆಯ ದರದಲ್ಲಿಯೇ ಪ್ರತಿಗಳನ್ನು ಪಡೆದುಕೊಳ್ಳುತ್ತಾರೆ. ನವೀಕರಣದ ಸಮಯದಲ್ಲಿ ಮಾತ್ರ ಹೊಸ ದರ ಅನ್ವಯವಾಗುತ್ತದೆ.

1. ಬಿಡಿ ಪ್ರತಿ : ರೂ. 14/– ; 2. ವಾರ್ಷಿಕ ಚಂದಾ : ರೂ. 140/–;
3. ಮೂರು ವರ್ಷದ ಚಂದಾ : ರೂ. 375/–;
4. ಆಜೀವ ಚಂದಾ (25 ವರ್ಷಗಳಿಗೆ ಮಾತ್ರ) : ರೂ. 3000/;
5. ಪೋಷಕ ಸಹಾಯಧನ (25 ವರ್ಷಗಳಿಗೆ ಮಾತ್ರ) : ರೂ. 5,000/–

ವ್ಯವಸ್ಥಾಪಕ ಸಂಪಾದಕರು